ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **89/2025**

ಸಿ ಡಬ್ಲ್ಯು ಃ**-6**

ಪಿ ಡಬ್ಲ್ಯು ಃ**-4**

| | |
|---|---|
| ಸಾಕ್ಷಿದಾರರ ಹೆಸರು | ಃ ರಾಜೇಶ |
| ತಂದೆಯ ಹೆಸರು | ಃ ರುದ್ರಮೂರ್ತಿ |
| ವಯಸ್ಸು | ಃ**42** ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸಸ್ಥಳ | ಃ ಅಳಲಗೆರೆ, ಎನ್ ಆರ್ ಪುರ |

ದಿನಾಂಕಃ **18-05-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

1. ಚಾಸಾ-1 ರಿಂದ 3 ರವರ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ಥಳ ಮಹಜರ್ ಹಾಗೂ ಅಮಾನತ್ತು ಮಹಜರ್ ಅನ್ನು ಮಾಡಿರುವುದಿಲ್ಲ. ಹಾಗೂ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ದಿನಾಂಕಃ 26.06.2025 ರಂದು ಮಾಡಿದ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳದ ಒಂದು ಪೋಟೋದಲ್ಲಿ ತಮ್ಮ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -9 ಎಂದು ಗುರುತಿಸಲಾಗಿದ್ದು. ಸಾಕ್ಷಿಯು ದಿನಾಂಕಃ 26.06.2025 ರಂದು ಎನ್ ಆರ್ ಪೋಲಿಸ್ ಠಾಣಾ ಆವರಣದಲ್ಲಿ ಮಾಡಿದ ವಾಹನ ಅಮಾನತ್ತು ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತ್ತು ಮಹಜರ್ ಅನ್ನು ಈಗಾಗಲೇ ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಮಹಜರ್ ಮಾಡುವ ಕಾಲಕ್ಕೆ ತೆಗೆದ ಒಂದು ಭಾವಚಿತ್ರದಲ್ಲಿ ತಮ್ಮ ಪೋಟೋವನ್ನು ಹಾಗೂ ಓಮಿನಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -11 ಎಂದು ಗುರುತಿಸಲಾಗಿರುತ್ತದೆ. ನಿಪಿ-8 ಮತ್ತು 10 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. (ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು

ಮಾಡಲು ಅನುಮತಿ ನೀಡಲಾಯಿತು.)

ಃಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ

1. ದಿಃ 26.06.2025 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ದಿನಾಂಕಃ 22.06.2025 ರಂದು ಮಧ್ಯಾಹ್ನ 3.15 ಗಂಟೆಗೆ ಕನ್ಯಾಕುಮಾರಿ ಹೋಟೇಲ್ ಕಾಂಪ್ಲೆಕ್ಸ್ ಮುಂಭಾಗದ ಎನ್ ಆರ್ ಪುರ ಕೊಪ್ಪ ಮುಖ್ಯ ರಸ್ತೆಯಲ್ಲಿ ಕೊಪ್ಪ ಕಡೆಯಿಂದ ಎನ್ ಆರ್ ಪುರ ಕಡೆಯ ಹೋಗವ ಟಾರ್ ರಸ್ತೆಯ ಎಡಬದಿಯಲ್ಲಿ ಚಾಸಾ 6 ರವರ ಬಾಬ್ತು ಕೆ.ಎ 14 ಎನ್ 3381 ಓಮಿನಿ ಕಾರನ್ನು ನಿಲ್ಲಿಸಿಕೊಂಡಿದ್ದು, ಅದೇ ವೇಳೆಗೆ ಸಿಂಸೆ ಕಡೆಯಿಂದ ಬಂದ ಕೆ.ಎ 14 ಸಿ 7379 ನಂಬರ್ ನ ಬೊಲೆರೋ ಪಿಕ್ ಅಪ್ ಚಾಲಕನು ಸದರಿ ವಾಹನವನ್ನು ಅತೀ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ಕಾರಿನ ಹಿಂಬದಿಗೆ ಡಿಕ್ಕಿ ಪಡಿಸಿ ನಿಲ್ಲಿಸದೇ ಹೋದ ಸ್ಥಳ ಇದೆ ಎಂದು ತೋರಿಸಿದ ಮೇರೆಗೆ ನಮ್ಮ ಸಮಕ್ಷಮ ಬೆಳಗ್ಗೆ 11.30 ಗಂಟೆಯಿಂದ 12.00 ಗಂಟೆ ಅವಧಿಯಲ್ಲಿ ನಿಪಿ-8 ರಂತೆ ಕೃತ್ಯ ಸ್ಥಳದ ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 8 ರಂತೆ ಮಹಜರ್ ಮಾಡುವ ಕಾಲಕ್ಕೆ ನಿಪಿ9 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

2. ದಿನಾಂಕಃ 26.06.2025 ರಂದು ನಾನು ನಮ್ಮ ವಾಹನವನ್ನು ಗುರುತಿಸಿದ ಮೇರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಎನ್ ಆರ್ ಪುರ ಪೋಲಿಸ್ ಠಾಣಾ ಆವರಣದಲ್ಲಿ ಓಮಿನಿ ಕಾರ್ ಸಂಖ್ಯೆ ಕೆಎ 14 ಎನ್ 3381 ಅನ್ನು ಪೋಲಿಸರು ತಮ್ಮ ಪೋಲಿಸ್ ಠಾಣಾ ಆವರಣದಲ್ಲಿ ಪರೀಶಿಲಿಸಿ ಅದನ್ನು ನಮ್ಮ ಸಮಕ್ಷಮ ಮದ್ಯಾಹ್ನ 12.05 ರಿಂದ 12.35 ರ ಅವಧಿಯಲ್ಲಿ ನಿಪಿ-10 ರಂತೆ ಅಮಾನತ್ತು ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-10 ರಂತೆ ಮಹಜರ್ ಮಾಡುವ ಕಾಲಕ್ಕೆ ನಿಪಿ-11 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ನಿಪಿ8 ರಂತೆ ಕೃತ್ಯ ಸ್ಥಳದ ಮಹಜರ್ ಅನ್ನು ಹಾಗೂ ನಿಪಿ10 ರಂತೆ ಅಮಾನತ್ತು ಮಹಜರ್ ಅನ್ನು ಮಾಡಿ ನಮಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಕೃತ್ಯ ಸ್ಥಳ ಹಾಗೂ ಅಮಾನತು ಮಹಜರ್ ಅನ್ನು ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಿಃ 26-06-2025 ರಂದು ನಾನು ಘಟನೆಗೆ ಸಂಬಂಧಿಸಿದಂತೆ ದಿಃ22.06.2025 ರಂದು ಮದ್ಯಾಹ್ನ 3.15 ಗಂಟೆಗೆ ನಾನು ಕೊಪ್ಪ ಕಡೆಯಿಂದ ನ.ರಾ. ಪುರ ಕಡೆಗೆ ಹೋಗುವ ಟಾರ್ ರಸ್ತೆಯ ಎಡ ಬದಿಯಲ್ಲಿ ಕನ್ಯಾಕುಮಾರಿ ಹೋಟೆಲ್ ಕಾಂಪ್ಲೆಕ್ಸ್ ಮುಂಭಾಗ ನನ್ನ ಬಾಬ್ತು ಹೋಮಿನಿ ಕಾರ್ ಸಂಖ್ಯೆ ಕೆ ಎ 14 ಎನ್ 3381 ಅನ್ನು ನಿಲ್ಲಿಸಿಕೊಂಡಿದ್ದು ಆ ವೇಳೆಗೆ ಶಿಂಸೆ ಕಡೆಯಿಂದ ಬಂದ ಬೋಲೆರೊ ಪಿಕ್ ಅಪ್ ವಾಹನ ಸಂಖ್ಯೆ ಕೆ ಎ 14 ಸಿ 7379

ಚಾಲಕನು ನನ್ನ ಕಾರಿನ ಹಿಂಬದಿಗೆ ಡಿಕ್ಕಿ ಹೊಡೆಸಿ ನಿಲ್ಲಿಸದೇ ಓಡಿ ಹೋಗಿದ್ದನು ಎಂದರೆ ಸರಿಯಲ್ಲ. ನಂತರ ನಾನು ಸದರಿ ಬೋಲೆರೂ ಪಿಕ್ ಅಪ್ ಹಿಂಬದಿಯಲ್ಲಿ ಕುರುಬನ ರಾಣಿಯೆಂದು ಬರೆದಿದ್ದು, ಸದರಿ ವಾಹನವನ್ನು ನಿಲ್ಲಿಸುವಂತೆ ಚಾಸಾ -1 ರವರಿಗೆ ಫೋನ್ ಮುಖಾಂತರ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಸದರಿ ಚಾಸಾ-1 ರವರು ಸದರಿ ವಾಹನದ ಚಾಲಕ ಮತ್ತು ಆತನ ಜೊತೆಗಿದ್ದವರು ಮುತ್ತಿನಕೊಪ್ಪದ ಪಜೇರೋ ಹೋಟೆಲ್ ಬಳಿ ವಾಹನ ನಿಲ್ಲಿಸಿದ್ದು, ಸದರಿಯವರು ಚಾಸಾ-1 ರವರನ್ನು ಆಕ್ರಮವಾಗಿ ಕರೆದುಕೊಂಡು ಹೋಗಿ ಭದ್ರಾವತಿ ಖಾರೇಹಳ್ಳಿ ಬ್ರಿಡ್ಜ್ ಬಳಿ ಹಲ್ಲೆ ಮಾಡಿರುವ ಬಗ್ಗೆ ದೂರು ದಾಖಲಾಗಿದ್ದು ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನ ಹೋಮಿನಿ ಕಾರನ್ನು ತಂದು ಹಾಜರುಪಡಿಸುವಂತೆ ನೋಟಿಸ್ ನೀಡಿದ್ದು ನನ್ನ ಸಮಕ್ಷಮ ನಿಪಿ-10 ರಂತೆ ಅಮಾನತು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ಕಾರಿನ ಹಿಂಬದಿಗೆ ಡಿಕ್ಕಿ ಪಡೆಸಿದ ವಾಹನವನ್ನು ನೋಡಿ ಗುರುತಿಸಿದ್ದು ಆ ಸಂಬಂಧ ನಾನು ಈಗ ಓದಿ ಹೇಳಿದ ನಿಪಿ-12 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-12 ರಂತೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಆರೋಪಿತರಿಗೂ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ